# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN): U40109KA1999SGC025521

ಸಂಖ್ಯೆ: B31/SEE(IT)/45450/2023-24
ಲಗತ್ತು:

ನಿಗಮ ಕಾರ್ಯಾಲಯ
ಕಾವೇರಿ ಭವನ
ಬೆಂಗಳೂರು-560009
ದಿನಾಂಕ: 25/01/2024

**ವಿಷಯ:** ಕವಿಪ್ರನಿನಿ ಯಲ್ಲಿ IT/OT/IoT ಯ ಮಾಹಿತಿ ಮತ್ತು ಸೈಬರ್ ಭದ್ರತಾ ನೀತಿ ಹಾಗು ಸೈಬರ್ ಕ್ರೈಸಿಸ್ ನಿರ್ವಹಣೆ ಯೋಜನೆ (CCMP) ಯ ಅನುಷ್ಠಾನ ಕುರಿತು.

**ಉಲ್ಲೇಖ:**
1. CEA (Cyber Security in Power Sector) Guidelines 2021 issued by Central Electricity Authority, Ministry of Power, Government of India.
2. 142 ನೇ ಕವಿಪ್ರನಿನಿ ಮಂಡಳಿಯ ನಿರ್ದೇಶಕರ ಸಭೆಯ ನಿರ್ಣಯ ವಿಷಯ ಸಂಖ್ಯೆ:142/12.

**ಪೀಠಿಕೆ:**

ವಿದ್ಯುತ್ ವಲಯವು ಅತೀ ಸೂಕ್ಷ್ಮ ಹಾಗೂ ಪ್ರಾಮುಖ್ಯವುಳ್ಳ ವಲಯವಾಗಿರುವ ಹಿನ್ನೆಲೆಯಲ್ಲಿ ಸೈಬರ್ ದಾಳಿಗೆ ತುತ್ತಾಗುವ ಸಂಭವವು ಹೆಚ್ಚಾಗಿರುತ್ತದೆ.

ಕವಿಪ್ರನಿನಿ, ವಿದ್ಯುತ್ ವಲಯದಲ್ಲಿ ಹೆಚ್ಚುತ್ತಿರುವ ಸೈಬರ್ ಕ್ರೈಮ್ ಮನಗಂಡು, ಸಮಗ್ರ ಸೈಬರ್ ಭದ್ರತಾ ನೀತಿ ಹಾಗು ಸೈಬರ್ ಕ್ರೈಸಿಸ್ ನಿರ್ವಹಣೆ ಯೋಜನೆ (CCMP) ಯನ್ನು ಅಳವಡಿಸಿಕೊಂಡಿದೆ. ಈ ಸೈಬರ್ ಭದ್ರತಾ ನೀತಿಯು, ಕಟ್ಟುನಿಟ್ಟಾದ ಪ್ರವೇಶ ನಿಯಂತ್ರಣಗಳು, ಡೇಟಾ ರಕ್ಷಣೆ ಕ್ರಮಗಳು ಮತ್ತು ಘಟನೆ ಪ್ರತಿಕ್ರಿಯೆ ಪ್ರೋಟೋಕಾಲ್‌ಗಳಿಂದ ಕವಿಪ್ರನಿನಿಯ ಪ್ರಮುಖ ಉಪಕರಣಗಳು, ಡೇಟಾ ಹಾಗೂ ಗಣಕಯಂತ್ರ ಗಳಿಗೆ ಸೈಬರ್ ಕ್ರೈಮ್‌ನಿಂದ ರಕ್ಷಣೆ ನೀಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ಈ ಸೈಬರ್ ಭದ್ರತಾ ನೀತಿ ಹಾಗು ಸೈಬರ್ ಕ್ರೈಸಿಸ್ ನಿರ್ವಹಣೆ ಯೋಜನೆ (CCMP) ಯು, 142 ನೇ ಕವಿಪ್ರನಿನಿ ಮಂಡಳಿಯ ನಿರ್ದೇಶಕರ ಸಭೆಯಲ್ಲಿ ನಿರ್ಣಯಗೊಂಡಿರುತ್ತದೆ. ಈ ನೀತಿಯು password policy, Internet Policy, Ethics policy ಮುಂತಾದವುಗಳನ್ನು ಒಳಗೊಂಡಿರುತ್ತದೆ ಹಾಗೂ ಕವಿಪ್ರನಿನಿಯ ಪ್ರತಿಯೊಬ್ಬ ನೌಕರ/ಅಧಿಕಾರಿಯ ಪಾತ್ರ ಮತ್ತು ಜವಾಬ್ದಾರಿಯನ್ನು ವ್ಯಾಖ್ಯಾನಿಸಿದೆ. ಆದ್ದರಿಂದ ಈ ಆದೇಶ:

**ಆದೇಶ**

**ಸಂಖ್ಯೆ:** B31/SEE(IT)/45450/2023-24, ದಿನಾಂಕ: 25/01/2024

ಕವಿಪ್ರನಿನಿ ಯಲ್ಲಿ IT/OT/IoT ಯ ಮಾಹಿತಿ ಮತ್ತು ಸೈಬರ್ ಭದ್ರತಾ ನೀತಿ ಹಾಗು ಸೈಬರ್ ಕ್ರೈಸಿಸ್ ನಿರ್ವಹಣೆ ಯೋಜನೆ (CCMP) ಯು ಅನುಷ್ಠಾನಗೊಂಡಿರುತ್ತದೆ. ಕವಿಪ್ರನಿನಿಯ ಎಲ್ಲಾ ನೌಕರ/ಅಧಿಕಾರಿಯು ತಕ್ಷಣದಿಂದ, ಸೈಬರ್ ಭದ್ರತಾ ನೀತಿ ಹಾಗು ಸೈಬರ್ ಕ್ರೈಸಿಸ್ ನಿರ್ವಹಣೆ ಯೋಜನೆ (CCMP) ಯಲ್ಲಿ ವ್ಯಾಖ್ಯಾನಿಸಿರುವ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಹಾಗು ಎಲ್ಲಾ ಕಂಟ್ರೊಲಿಂಗ್ ಅಧಿಕಾರಿಗಳು ಭದ್ರತಾ ನೀತಿಯ ಪ್ರಾಮುಖ್ಯತೆಯನ್ನು ಇತರರಿಗೆ ತಿಳಿಸಲು ಹಾಗು ದೈನಂದಿನ ಚಟುವಟಿಕೆಗಳಲ್ಲಿ ಅಳವಡಿಸಿಕೊಳ್ಳಲು ಈ ಮೂಲಕ ಸೂಚಿಸಲಾಗಿರುತ್ತದೆ.

ನಿರ್ದೇಶಕರು (ಆ ಮತ್ತು ಮಾ. ಸಂ.)
ಕವಿಪ್ರನಿನಿ, ಬೆಂಗಳೂರು.

ಪ್ರತಿ:

1. ನಿರ್ದೇಶಕರು (ಪ್ರಸರಣ), ಕೆಪಿಟಿಸಿಎಲ್, ಕಾವೇರಿ ಭವನ, ಬೆಂಗಳೂರು.
2. ನಿರ್ದೇಶಕರು (ಹಣಕಾಸು), ಕೆಪಿಟಿಸಿಎಲ್, ಕಾವೇರಿ ಭವನ, ಬೆಂಗಳೂರು.
3. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಕೆಪಿಟಿಸಿಎಲ್, ಕಾವೇರಿ ಭವನ, ಬೆಂಗಳೂರು.
4. ಎಲ್ಲಾ ಮುಖ್ಯ ಇಂಜಿನಿಯರ್ ರವರುಗಳು, ಕೆಪಿಟಿಸಿಎಲ್, ಸೈಬರ್ ನೀತಿಗಳ ಅನುಷ್ಠಾನಕ್ಕೆ ಅಗತ್ಯ ಕ್ರಮ ಕೈಗೊಳ್ಳಲು.
5. ಎಲ್ಲಾ ಅಧೀಕ್ಷಕ ಇಂಜಿನಿಯರ್ ರವರುಗಳು, ಕೆಪಿಟಿಸಿಎಲ್, ಸೈಬರ್ ನೀತಿಗಳ ಅನುಷ್ಠಾನಕ್ಕೆ ಅಗತ್ಯ ಕ್ರಮ ಕೈಗೊಳ್ಳಲು.
6. ಕಂಪನಿ ಕಾರ್ಯದರ್ಶಿಗಳು, ಕೆಪಿಟಿಸಿಎಲ್, ಕಾವೇರಿ ಭವನ, ಬೆಂಗಳೂರು.
7. ಆಪ್ತ ಕಾರ್ಯದರ್ಶಿಗಳು, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ, ಬೆಂಗಳೂರು ರವರು ಪ್ರತಿಯನ್ನು ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ ರವರ ಮುಂದಿರಿಸಲು.
8. ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು, ಕೆಪಿಟಿಸಿಎಲ್, ಕಾವೇರಿ ಭವನ, ಬೆಂಗಳೂರು ರವರು ಪ್ರತಿಯನ್ನು ವ್ಯವಸ್ಥಾಪಕ ನಿರ್ದೇಶಕರು, ಕೆಪಿಟಿಸಿಎಲ್ ರವರ ಮುಂದಿರಿಸಲು.